ಕ್ಷಮೆಯಿರಲಿ.’

ಹೀಗೆಂದವ ನನ್ನ ಉತ್ತರಕ್ಕೆ ಕಾಯದೆ ತನ್ನ ಸಾರೋಟನ್ನೇರಿ ಹೊರಟುಬಿಟ್ಟ. ನಾನು ಗರಬಡಿದವಳಂತೆ ನಿಂತಿದ್ದೆ. ಓಡಿಬಂದ ಕೇಸರ್ ಹೇಳಿದಳು ‘ತಿಳಿಯದೆ ನನ್ನಿಂದ ತಪ್ಪಾಗಿ ಹೋಯಿತು. ಆತ ಪ್ರಸಿದ್ಧ ಚಿತ್ರಕಲಾವಿದ ರಾಜಾ ರವಿವರ್ಮನಂತೆ, ಗಾಡಿಯ ಚಾಲಕ ಹೇಳಿದ’.

ಆ ದಿನ ನಾನು ಕೋಳಿವಾಡದಲ್ಲಿನ ನನ್ನ ಮನೆ ತಲುಪಿದಾಗ ನನ್ನ ಚಿಕ್ಕಮ್ಮ ಬಕಾಬಾಯಿ ಅಕ್ಕಿ ಕೇರುತ್ತಿದ್ದಳು. ಅಡುಗೆಯ ನಾರಾಯಣ ಘಮಘಮಿಸುವ ಕೇಸರಿಬಾತ್‌ನ ತಯಾರಿ ನಡೆಸಿದ್ದ. ನಾನು ನೇರವಾಗಿ ಮಹಡಿಯೇರಿ ನನ್ನ ಕೋಣೆ ಸೇರಿದೆ. ಚಿತ್ರಪಟವನ್ನು ಗೂಡಿನಲ್ಲಿಟ್ಟು ಅದನ್ನೇ ನೋಡುತ್ತಾ ನನ್ನ ಪಲ್ಲಂಗದ ಮೇಲೆ ಶಯನಿಸಿದೆ. ಕನ್ನಡಿಯಲ್ಲಿ ಕಂಡ ನನ್ನ ಪ್ರತಿಬಿಂಬಕ್ಕಿಂತ ಅವನು ರಚಿಸಿದ ಚಿತ್ರ ಸುಂದರವಾಗಿತ್ತು. ಬರಿಯ ನೆನಪಿನಿಂದಲೇ ಅವನು ಇಂತಹ ಅದ್ಭುತ ಚಿತ್ರ ರಚಿಸಿದನೆಂದರೆ ಅವನ ಪ್ರತಿಭೆ ಎಷ್ಟಿರಬಹುದು! ಅವನ ಮಾತಿನಲ್ಲೂ ಸತ್ಯಾಂಶವಿದೆ ಎನಿಸಿತು. ನನ್ನ ಈ ಸೌಂದರ್ಯ ಒಂದು ದಿನ ಇಲ್ಲವಾಗುವುದೆಂಬ ಕಟುಸತ್ಯವನ್ನು ನಾನು ಒಪ್ಪಲು ಸಿದ್ಧಳಿರಲಿಲ್ಲ. ಆ ಯೋಚನೆಯೇ ನನ್ನಲ್ಲಿ ನಡುಕ ಹುಟ್ಟಿಸಿತು.

ಮರುದಿನ ವಾಲ್ಕೇಶ್ವರನ ಗುಡಿಗೆ ತುಂಬಾ ಶ್ರದ್ಧೆಯಿಂದ ಅಲಂಕರಿಸಿಕೊಂಡು ಹೊರಟೆ. ಆದರೆ ನಾನು ಭಾವಿಸಿದಂತೆ ಆತ ಬಂದಿರಲಿಲ್ಲ. ನಾನು ಪ್ರತಿದಿನ ಹೋಗುತ್ತಿದ್ದೆನಾದರೂ, ಆತ ಮತ್ತೆ ಕಾಣಲೇ ಇಲ್ಲ. ಅವನ ಜೊತೆಗೆ ನನ್ನ ತುಟಿಯ ಮೇಲಿನ ಮಂದಹಾಸವೂ ಮಾಯವಾಗಿತ್ತು. ಮನೆಗೆ ಬಂದವಳೇ ನಿರಾಸೆಯಿಂದ ಮಲಗಿಬಿಟ್ಟೆ.

ನಾನು ಊಟವನ್ನು ಮಾಡದಿದ್ದಾಗ ಚಿಕ್ಕಮ್ಮನಿಗೆ ಗಾಬರಿಯಾಯಿತು. ‘ಆ ಚಿತ್ರ ಮನೆಗೆ ಬಂದಂದಿನಿಂದ ನೀನು ಮೊದಲಿನಂತಿಲ್ಲ. ಏನಾಯ್ತೆ ನಿನಗೆ? ಏಕೆ ಹೀಗೆ ಊಟನಿದ್ರೆಯಿಲ್ಲದೆ ನಿನ್ನನ್ನೇ ದಂಡಿಸಿಕೊಳ್ಳುತ್ತೀ ಸುಗಂಧ?’ ನಾನು ಮಾತನಾಡದೆ ಗೋಡೆಯ ಕಡೆ ತಿರುಗಿಕೊಂಡೆ. ಚಿಕ್ಕಮ್ಮ ವಟಗುಟ್ಟುತ್ತಾ ಮಹಡಿಯಿಳಿದು ಹೋದಳು. ಅಷ್ಟರಲ್ಲಿ ನನ್ನ ಸಖಿ ಕೇಸರ್ ಮಹಡಿಗೆ ಬಂದಳು ‘ಅವನಿರುವ ಜಾಗ ತಿಳಿಯಿತು’ ಎಂದಳು.

‘ಯಾರು? ಅವನೆಂದರೆ?’

‘ಅದೇ ಆ ಚಿತ್ರಕಾರ. ಅವನು ಭಾಟಿಯಾ ಬಂಗಲೆಯಲ್ಲಿದ್ದಾನಂತೆ. ಈವತ್ತು ತರಕಾರಿ ಮಾರ್ಕೆಟ್‌ನಲ್ಲಿ ಅವನ ಆಳು ಪಾಚನ್ ಸಿಕ್ಕಿದ್ದ. ನಾನು ಕೇಳಿ ತಿಳಿದುಕೊಂಡೆ. ನಾಲ್ಕು ದಿನದಿಂದ ಅವನು ಚಿತ್ರ ಬರೆಯುತ್ತಾ ತನ್ನ ಕೋಣೆಯಲ್ಲೇ ಇದ್ದಾನಂತೆ, ಹೊರಗೆಲ್ಲೂ ಬಂದೇ ಇಲ್ಲವಂತೆ’ ಒಂದೇ ಉಸುರಿಗೆ ಹೇಳಿದಳು ಕೇಸರ್. ನನ್ನ ತುಟಿಯಲ್ಲೊಂದು ಮಂದಹಾಸ ಸುಳಿದು ಮರೆಯಾಯ್ತು.

ಹೃದಯ ಹತ್ತಿಯಷ್ಟು ಹಗುರಾಯಿತು. ನನ್ನ ಪೆಟ್ಟಿಗೆಯಿಂದ ಅವಳಿಗೊಂದು ಬೆಳ್ಳಿ ನಾಣ್ಯ ಕೊಟ್ಟು ಕೃತಜ್ಞತೆ ಸೂಚಿಸಿದೆ. ನೆಮ್ಮದಿಯಿಂದ ನಿದ್ರಿಸಿದೆ ಆ ರಾತ್ರಿ!

## ರವಿವರ್ಮ

ಮನೆಯ ಮುಂದೆ ಒಂದು ಸಾರೋಟು ನಿಂತಿದ್ದನ್ನು ನಾನು ನನ್ನ ಕೋಣೆಯ ಕಿಟಕಿಯಿಂದ ನೋಡಿದೆ. ಇಳಿದವಳನ್ನು ನೋಡಿ ನನ್ನ ಕಣ್ಣುಗಳೇ ಸುಳ್ಳಾಡುತ್ತಿವೆಯೋ ಎಂದು ಭ್ರಮಿಸಿದೆ. ಹೌದು... ಅವಳೇ ನನ್ನ ಚಿತ್ರಸುಂದರಿ... ಅವಳ ಹೆಸರೇನು ಹೇಳಿದ್ದಳು ಆ ದಾಸಿ... ಸುಗಂಧಾಬಾಯಿ ಎಂದಲ್ಲವೆ? ಆಹಾ! ಹೆಸರೂ ಅವಳಂತೆಯೇ ಮೋಹಕ; ಮಧುರ... ಸುಂದರ ಅಬ್ಬಾ! ಅದೇನು ವಶೀಕರಿಸುವ ವದನ... ಮಾತನಾಡುವ ನಯನಗಳು... ಮೃದು ಅಧರಗಳು... ಹಾರಾಡುವ ಉದ್ದನೆಯ ಕಪ್ಪುಕೂದಲು... ಗೌರವರ್ಣ...!

ಮೊದಲ ದಿನ ನಾನು ಕಂಡ ಆ ಹಚ್ಚಹಸಿರು ಸೀರೆಯಲ್ಲಂತೂ ಅವಳು ಸ್ವರ್ಗದಿಂದಿಳಿದ ವನದೇವಿಯಂತೆಯೇ ಕಾಣುತ್ತಿದ್ದಳಲ್ಲಾ! ಅದೂ ಆ ಮರಾಠಿಗಳ ಕಚ್ಚೆಯಲ್ಲಿ ಅವಳ ಕುಚನಿತಂಬಗಳು ಮತ್ತಷ್ಟು ಆಕರ್ಷಕವಾಗಿ ಕಂಡವಲ್ಲ! ಇದೇನು ನನ್ನ ಕನಸೋ ಅಥವಾ ನಿಜದಲ್ಲೂ ಕಾಣುತ್ತಿರುವೆನೋ ಯೋಚಿಸುತ್ತಾ ಹಿಂತಿರುಗಿದಾಗ ಪಾಚನ್ ಹೇಳಿದ ‘ನಿಮ್ಮನ್ನು ಕಾಣಲು ಇಬ್ಬರು ಹೆಂಗಸರು ಕೆಳಗೆ ಕುಳಿತಿದ್ದಾರೆ’. ನಾನು ಕುರ್ತಾ ತೊಟ್ಟು ಕೆಳಗಿಳಿದೆ. ಬಂದವರನ್ನು ನೋಡಿ ಕೈಮುಗಿದೆ. ‘ಪೊಲೀಸರನ್ನು ಕರೆತಂದಿದ್ದೀರೇನು?’ ಹುಸಿನಗುತ್ತಾ ಛೇಡಿಸುವಂತೆ ಕೇಳಿದೆ ದಾಸಿಗೆ, ಅವಳೂ ಮುಗುಳ್ನಕ್ಕಳು. ಅವಳೆದುರಿಗೆ ಸುಗಂಧಳೊಡನೆ ಮಾತನಾಡುವುದು ಬೇಡವೆಂದು ‘ಬನ್ನಿ ನನ್ನ ಸ್ಟುಡಿಯೋ ನೋಡುವಿರಂತೆ, ಅಲ್ಲಿಯೇ ಮಾತನಾಡೋಣ’ ಎಂದೆ.

ನನ್ನ ಕೋಣೆಯಲ್ಲಿ ಹರಡಿದ್ದ ಚಿತ್ರಗಳನ್ನೆಲ್ಲಾ ಕೂಲಂಕಷವಾಗಿ ನೋಡಿದ ಸುಗಂಧ ‘ಬಹಳ ಒಳ್ಳೆಯ ಕಲಾವಿದರು ನೀವು, ನನ್ನ ಚಿತ್ರ ರಚಿಸಿದ್ದಕ್ಕಾಗಿ ತುಂಬಾ ಧನ್ಯವಾದಗಳು. ಆ ಚಿತ್ರವನ್ನು ಹಿಂತಿರುಗಿಸೋಣ ಎಂದು ಬಂದಿದ್ದೇನೆ. ಆ ದಿನವಾದ ಮೇಲೆ ಮತ್ತೆ ನೀವು ಗುಡಿಯಲ್ಲಿ ಕಾಣಲೇ ಇಲ್ಲ.’ ನನ್ನನ್ನು ಅವಳು ಎದುರುನೋಡುತ್ತಿದ್ದಾಳೆಂಬ ಸಂಗತಿಯೇ ನನಗೆ ಅಚ್ಚರಿಯನ್ನೂ, ಪುಳಕವನ್ನೂ ನೀಡಿತು. ನಾನು ಮೆಲುನಗುತ್ತಾ ‘ಹೌದು, ನನ್ನ ಮನೆಯಲ್ಲಿ ಒಂದು ಪೂಜೆಯ ಕಾರ್ಯದಲ್ಲಿ ತಲ್ಲೀನನಾಗಿ ಬಿಟ್ಟಿದ್ದೆ. ಹಾಗಾಗಿ ಬರಲಿಲ್ಲ. ಅದೇಕೆ ನಿಮಗೆ ಚಿತ್ರ ಹಿಡಿಸಲಿಲ್ಲವೆ?’ ಎಂದೆ. ‘ತುಂಬಾ ಹಿಡಿಸಿತು. ಅದಕ್ಕೆ ಹಿಂತಿರುಗಿಸೋಣ ಎಂದು ನನಗೆ ಯಾವ ಉಡುಗೊರೆಯನ್ನೂ ಬೆಲೆ ಕೊಡದೆ ಸ್ವೀಕರಿಸುವ ಅಭ್ಯಾಸವಿಲ್ಲ.’

‘ಪ್ರತಿಯೊಂದಕ್ಕೂ ಬೆಲೆ ಇದೆ. ಆದರೆ ನೀವು ಆ ಬೆಲೆ ಕೊಡಲು ಸಾಧ್ಯವಿಲ್ಲವೇನೋ ಎಂಬ ಶಂಕೆ. ನಿಮ್ಮ ಅಸಾಧಾರಣ ದೇಹ ಸೌಂದರ್ಯದೊಂದಿಗೆ, ನಿಮ್ಮ ಮುಖದಲ್ಲಿನ ಮುಗ್ಧತೆ, ಪರಿಶುದ್ಧತೆ ನನ್ನನ್ನು ತುಂಬಾ ಆಕರ್ಷಿಸಿದೆ. ನಾನು ರಚಿಸಿರುವ ‘ಶಾಕುಂತಲೆಯ ಪತ್ರಲೇಖನ’ ಚಿತ್ರಕ್ಕೆ ನನಗೆ ಅನೇಕ ಪದಕಪ್ರಶಸ್ತಿಗಳು ಬಂದಿವೆ. ಆದರೆ ಅದನ್ನು ಬರೆಯುವ ಮುನ್ನ ನಿಮ್ಮನ್ನು ನೋಡಿದ್ದರೆ ಇನ್ನೂ ಹೆಚ್ಚು ಪ್ರಶಸ್ತಿಗಳು ಬರುತ್ತಿದ್ದುವೇನೋ’. ಅವಳು ನಾಚಿಕೆಯಿಂದ ಕೆಂಪಾದದ್ದನ್ನು ಗಮನಿಸಿದೆ. ಮತ್ತೆ ಹೇಳಿದೆ ‘ನಾನು ಅನೇಕ ಪುರಾಣ ಪ್ರಸಂಗಗಳನ್ನು ಚಿತ್ರಿಸಬೇಕೆಂದಿದ್ದೇನೆ. ನಳ ದಮಯಂತಿ, ಹಂಸ–ದಮಯಂತಿ, ದ್ರೌಪದಿ, ಉಷಾ–ಅನಿರುದ್ಧ, ಊರ್ವಶಿ–ಪುರುರವ ಹೀಗೆಲ್ಲಾ. ಆದರೆ ಸುಮ್ಮನೆ ಊಹಿಸಿ ಬರೆಯುವುದು ಅಷ್ಟು ಸಮರ್ಪಕವಾಗಲಾರದು. ಆ ಚಿತ್ರ ರಚನೆಗೆ ನೀವು ರೂಪದರ್ಶಿಯಾದರೆ ನನ್ನ ಉಡುಗೊರೆಗೆ ನೀವು ಬೆಲೆ ಕೊಟ್ಟಂತೆ.’ ಸುಗಂಧ ‘ಯೋಚಿಸುತ್ತೇನೆ’ ಎಂದಳೇ ವಿನಃ ‘ಇಲ್ಲ’ ಎನ್ನಲಿಲ್ಲ. ನನಗದಷ್ಟೇ ಸಾಕಾಯ್ತು.

ಮರುದಿನ ಅವಳು ಮತ್ತೆ ಬಂದಾಗ ನಾನು ಅಚ್ಚರಿಗೊಂಡೆ. ‘ನನ್ನ ಚಿತ್ರವನ್ನು ಇಲ್ಲೇ ಮರೆತು ಹೋದೆ. ಅದನ್ನು ಹಿಂದಕ್ಕೆ ಪಡೆಯಲು ಬಂದೆ’ ಎಂದಳು. ಎರಡು ದಿನಗಳ ನಂತರ ನಾನು ಹೊರಗಿನಿಂದ ಬಂದಾಗ ಮನೆಯ ಮುಂದೆ ಸಾರೋಟು ನಿಂತಿರುವುದು ಕಂಡಿತು. ಯಾರು ಬಂದಿದ್ದಾರೋ ಎಂದು ಒಳಬಂದಾಗ ಕೆಳಗಿದ್ದ ರಾಜವರ್ಮ, ಗೋದವರ್ಮ ಎಲ್ಲಾ ಮುಸಿಮುಸಿ ನಗುತ್ತಿದ್ದರು. ‘ಯಾರು ಬಂದಿದ್ದಾರೆ?’ ಎಂದೆ. ‘ಇಲ್ಲಿ ಯಾರೂ ಇಲ್ಲ, ನಿನ್ನ ಕೋಣೆಯಲ್ಲಿ ಯಾರಾದರೂ ಇರಬಹುದು’ ಎನ್ನುತ್ತಾ ಗೋದವರ್ಮ ವೀಣೆಯಲ್ಲಿ ತಾನ ನುಡಿಸತೊಡಗಿದ. ನಾನು ಮೆಟ್ಟಿಲುಗಳನ್ನು ಹಾರುತ್ತಾ ನನ್ನ ಕೋಣೆ ಸೇರಿದೆ. ಚೆಲ್ಲಾಪಿಲ್ಲಿಯಾಗಿ ನಾನಿಟ್ಟ ಚಿತ್ರಗಳನ್ನೆಲ್ಲಾ ವರಸೆಯಾಗಿ ಜೋಡಿಸಲಾಗಿತ್ತು. ಕೋಣೆಯ ನಡುವೆ ಒಂದು ಐದು ಮೋಂಬತ್ತಿಗಳ ದೊಡ್ಡ ತೂಗುದೀಪ ನೇತಾಡುತ್ತಿತ್ತು. ನಾನು ಜೋರಾಗಿ ‘ಸುಗಂಧಾ ಎಲ್ಲಿದ್ದೀ?’ ಎಂದೆ. ತೆರೆಯ ಹಿಂದೆ ಸರಿತೆಯಂತೆ ಹರಿದು ಬಂದಳು ಗುಲಾಬಿ ಬಣ್ಣದ ಸೀರೆಯಲ್ಲಿ ಸುಗಂಧ!.

‘ಏನಿದೆಲ್ಲಾ’ ಎಂದೆ ಸ್ವಲ್ಪ ಕೋಪದಿಂದ. ‘ಏಕೆ ನಿಮ್ಮ ಕೋಣೆಗೆ ಇದು ತುಂಬಾ ಸೂಕ್ತ ಎನಿಸಿತು ಅದಕ್ಕೆ ತಂದೆ’ ಎಂದಳು. ನನ್ನ ಕೈಯಲ್ಲಿದ್ದ ಬೆಳ್ಳಿ ಊರುಗೋಲನ್ನು ಆ ತೂಗದೀಪಕ್ಕೆ ತಗುಲಿಸಿ ‘ಇದನ್ನು ನಾನೀಗ ಪುಡಿ ಮಾಡಿದರೆ?’ ಸುಗಂಧ ಬೆಚ್ಚಿ ‘ಹಾಗೆ ಮಾಡಿಬಿಡುವಿರಾ?’ ‘ಇಲ್ಲ, ಹೆದರಬೇಡ, ಯಾವುದೋ ಹಳೆಯ ನೆನಪು ಬಂತು ಇದನ್ನು ಕಂಡಾಗ... ಇದನ್ನು ನನಗಾಗಿ ಖರೀದಿಸಿದೆಯಾ?’

‘ಇಲ್ಲ, ನಾನು, ಕಮಲಾ, ಗೋವಾದಲ್ಲಿ ಹುಟ್ಟಿದವರು. ಚಿಕ್ಕಂದಿನಲ್ಲೇ ಅಮ್ಮನನ್ನು ಕಳೆದುಕೊಂಡವರು. ನನ್ನ ತಂದೆ ನಮಗೆಲ್ಲೂ ಸಿಕ್ಕಲೇ ಇಲ್ಲ. ಹಾಗಾಗಿ ನಾವು ಚಿಕ್ಕಮ್ಮನ ಆಶ್ರಯಕ್ಕೆ ಇಲ್ಲಿಗೆ ಬಂದೆವು. ಅವಳು ಒಬ್ಬ ಹಣವಂತ ಪಾರ್ಸಿ ಮುದುಕನಿಗೆ ನನ್ನನ್ನು ಮದುವೆ ಮಾಡಿಕೊಟ್ಟಳು. ಆತ ನನ್ನನ್ನು ಚೆನ್ನಾಗಿ ನೋಡಿಕೊಂಡ. ಒಮ್ಮೆ ಉಡುಗೊರೆಯಾಗಿ ಈ ತೂಗುದೀಪ ತಂದುಕೊಟ್ಟ. ಹೇಗೆ ಅನಿರೀಕ್ಷಿತವಾಗಿ ನನ್ನ ಬದುಕಿಗೆ ಬಂದನೋ ಹಾಗೇ ಅನಿರೀಕ್ಷಿತವಾಗಿ ಸಾವನ್ನಪ್ಪಿದ. ಅಂದಿನಿಂದ ಈ ತೂಗುದೀಪ ನನ್ನ ಪೆಟ್ಟಿಗೆಯಲ್ಲೇ ಇದೆ. ಈ ನಿಮ್ಮ ಚಿತ್ರರಚನಾ ಕೊಠಡಿಗೆ ಇದು ಸುಂದರವಾಗಿ